ದಿನಾಂಕ 10-02-2022 ರ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ ಮೇರೆಗೆ ಇಲಾಖೆಯಲ್ಲಿ ಖಾಲಿ ಇರುವ ಕಿರಿಯ ಸಹಾಯಕ ಇಂಜಿನಿಯರ್ ಹುದ್ದೆಗೆ, ನಿರ್ದೇಶಕರು ಇಂಧನ ಇಲಾಖೆ ಬೆಂಗಳೂರು -01 ಇವರಿಗೆ ಒಂದು ಅರ್ಜಿಯನ್ನು ಸಲ್ಲಿಸಿ.

ದಿನಾಂಕ : 15-02-2022

ಸ್ಥಳ : ಬೆಂಗಳೂರು

ಇವರಿಂದ,

ಅ.ಬ.ಕ,
ನಂ. 24, 3ನೇ ಮುಖ್ಯರಸ್ತೆ,
ಜಯನಗರ,
ಬೆಂಗಳೂರು - 560011.

ಇವರಿಗೆ,

ನಿರ್ದೇಶಕರು,
ಇಂಧನ ಇಲಾಖೆ,
ಬೆಂಗಳೂರು - 01.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

ಮಾನ್ಯರೇ,

ವಿಷಯ: ಕಿರಿಯ ಸಹಾಯಕ ಇಂಜಿನಿಯರ್ ಹುದ್ದೆಗೆ ಅರ್ಜಿ.

ದಿನಾಂಕ 10-02-2022ರ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ ಮೇರೆಗೆ ತಮ್ಮ ಇಲಾಖೆಯಲ್ಲಿ ಖಾಲಿ ಇರುವ ಕಿರಿಯ ಸಹಾಯಕ ಇಂಜಿನಿಯರ್ ಹುದ್ದೆಗೆ ನಾನು ಅರ್ಹನಾಗಿದ್ದು, ಈ ಅರ್ಜಿ ಸಲ್ಲಿಸುತ್ತಿದ್ದೇನೆ. ನನ್ನ ಬಗೆಗೆ ಸಂಪೂರ್ಣ ಸ್ವ-ವಿವರ ಮಾಹಿತಿ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ಶೈಕ್ಷಣಿಕ ವಿದ್ಯಾರ್ಹತೆ	ಪಾಸಾದ ವರ್ಷ	ಸಂಸ್ಥೆ/ವಿಶ್ವವಿದ್ಯಾಲಯ	ಶೇಕಡಾವಾರು ಅಂಕಗಳು
1.	ಎಸ್.ಎಸ್.ಎಲ್.ಸಿ	2014	ಕೆ.ಎಸ್.ಇ.ಇ.ಬೋರ್ಡ್	85%
2.	ಪಿ.ಯು.ಸಿ	2016	ಪಿ.ಯು.ಬೋರ್ಡ್	82%
3.	ಬಿ.ಇ. (ಎಲೆಕ್ಟ್ರಿಕಲ್ ಇಂಜಿನಿಯರಿಂಗ್)	2020	ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (VTU)	80%

ನನಗೆ ಎರಡು ವರ್ಷಗಳ ಕಾಲ ಖಾಸಗಿ ವಿದ್ಯುತ್ ಸಂಸ್ಥೆಯಲ್ಲಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದ ಅನುಭವವಿದೆ. ನನ್ನ ಎಲ್ಲ ಶೈಕ್ಷಣಿಕ ಅರ್ಹತೆಗಳ ನಕಲು ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿದ್ದೇನೆ. ದಯಾಳುಗಳಾದ ತಾವು ತಮ್ಮ ಇಲಾಖೆಯಲ್ಲಿ ಸೇವೆ ಮಾಡಲು ಅವಕಾಶ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಧನ್ಯವಾದಗಳು

ಇಂತಿ ತಮ್ಮ ಸೇವಾಕಾಂಕ್ಷಿ

(ಅ.ಬ.ಕ)

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ